ವಾರದ ಪತ್ರ

## ವಾಸನೆಯಿಂದ ವ್ಯಕ್ತಿತ್ವ ತಿಳಿಯಬಹುದೆ?

ರೈಲು ಪ್ರಯಾಣಿಕನೊಬ್ಬ ಸಹಪ್ರಯಾಣಿಕಳಿಗೆ ತನ್ನ ಫ್ಲಾಸ್ಕಿನಿಂದ ಚಹಾ ನೀಡಲು ಮುಂದಾಗುತ್ತಾನೆ. ಅಪರಿಚಿತೆ ಬೇಡವೆನ್ನುತ್ತಾಳೆ. ಆಗ ದೃಷ್ಟಿಹೀನ ಸಹ ಪ್ರಯಾಣಿಕನೊಬ್ಬ ತನಗೆ ಬೇಕೆನ್ನುತ್ತಾನೆ. ತಕ್ಷಣ ಆಕೆ, 'ಪ್ರಯಾಣದ ವೇಳೆ ಹಾಗೆಲ್ಲಾ ಅಪರಿಚಿತರಿಂದ ಆಹಾರ ವಸ್ತು ಸ್ವೀಕರಿಸಬಾರದು' ಎಂದು ಕಾಳಜಿಪೂರ್ವಕ ಸಲಹೆ ನೀಡುತ್ತಾಳೆ. ಆಗ ಆತ, 'ಸುವಾಸನೆಯಿಂದಲೇ ಕೆಟ್ಟದ್ದೋ ಒಳ್ಳೆಯದೋ ಎಂದು ತಿಳಿಯುತ್ತದೆ' ಎನ್ನುತ್ತಾ ಚಹಾ ಸೇವಿಸುತ್ತಾನೆ. ಈ ಮಾತಿಗೆ ಸಮ್ಮತಿ ಸೂಚಿಸುತ್ತಾ ಆಕೆಯೂ ಚಹಾ ಕುಡಿಯುತ್ತಾಳೆ. ಇದು ಒಂದು ಪ್ರಖ್ಯಾತ ಚಹಾ ಬ್ರ್ಯಾಂಡ್‌ನ ಜಾಹೀರಾತು! ಸುವಾಸನೆಯಿಂದ ಚಹಾದ ಗುಣಮಟ್ಟ ಪತ್ತೆಹಚ್ಚಬಹುದೇ ವಿನಃ ಜನರ ಮನಸ್ಸಿನ ಒಳ್ಳೆಯತನ ಅಥವಾ ಕೆಟ್ಟತನ ಅರಿತುಕೊಳ್ಳಲು ಸಾಧ್ಯವೇ? ಆಹಾರ ಪದಾರ್ಥಗಳ ರುಚಿಗೂ ಮಾನವ ಮನಸ್ಸಿನ ಸ್ವಭಾವಕ್ಕೂ ಎಲ್ಲಿಂದೆಲ್ಲಿಯ ಸಂಬಂಧ?

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ




## ತಪ್ಪಾಗದಂತೆ ಎಚ್ಚರ ಅವಶ್ಯ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಎರಡು ದಶಕಗಳಿಗೂ ಅಧಿಕ ಇತಿಹಾಸ ಇದೆ. ಇದು ಅತ್ಯಂತ ಜನಪ್ರಿಯ ಕಾರ್ಯಕ್ರಮವಾಗಿದ್ದು, ಬಹುತೇಕರು ತಪ್ಪದೆ ನೋಡುವ ಕಾರ್ಯಕ್ರಮವೂ ಹೌದು. ಇತ್ತೀಚೆಗೆ ಪ್ರಸಾರವಾದ ಸಂಚಿಕೆಯಲ್ಲಿ ಲೆಕ್ಕದ ಉತ್ತರವನ್ನು ತಪ್ಪಾಗಿ ನೀಡಿದ್ದಾರೆ. ಕಂಪ್ಯೂಟರ್ ಅಥವಾ ಕ್ಯಾಲ್ಕುಲೇಟರ್ ಬಳಸಿಯೂ ಅಂತಿಮ ಉತ್ತರವನ್ನು 335ರ ಬದಲಾಗಿ 364 ಎಂದು ತಪ್ಪಾಗಿ ಹೇಗೆ ಬರೆದರೋ ಗೊತ್ತಾಗುತ್ತಿಲ್ಲ. ವಿದ್ಯಾರ್ಥಿಗಳು ಅಧ್ಯಾಪಕರು ಇಷ್ಟ ಪಟ್ಟು ನೋಡುವ ಈ ಕ್ವಿಜ್ ಕಾರ್ಯಕ್ರಮದಲ್ಲಿ ದಯವಿಟ್ಟು ಇಂತಹ ತಪ್ಪುಗಳು ನುಸುಳದಂತೆ ಜಾಗ್ರತೆ ವಹಿಸಿ.

—ಆಶಾ ಅಪ್ರಮೇಯ, ದಾವಣಗೆರೆ

## ಧಾರಾವಾಹಿಗಳ ಸಕಾರಾತ್ಮಕ ಚಿಂತನೆ

ಝೀ ಕನ್ನಡದ 'ಸೀತಾರಾಮ' ಮತ್ತು 'ಶ್ರೀರಸ್ತು ಶುಭಮಸ್ತು' ಧಾರಾವಾಹಿಗಳ ಇತ್ತೀಚಿನ ಎರಡು ಸನ್ನಿವೇಶಗಳು ವಿಚಾರಪ್ರದವಾಗಿದ್ದವು. ಪ್ರಿ ವೆಡ್ಡಿಂಗ್ ಫೋಟೊಶೂಟ್‌ನಲ್ಲಿ ಸಹಜತೆ ಇರಲಿ ಎಂಬ ಕಾರಣಕ್ಕೆ ರಾಮನು ಸೀತೆಯ ದೈನಂದಿನ ದಿರಿಸಿನಲ್ಲೇ ಸೀತೆಯ ತಲೆ ಬಾಚುವ, ಮನೆ ಶುಚಿಗೊಳಿಸುವ, ಗಿಡಗಳನ್ನು ಪೋಷಿಸುವ, ಹಲ್ಲುಜ್ಜುವ, ಗ್ಯಾಸ್ ಸಿಲಿಂಡರ್ ಜೋಡಿಸುವ ದೃಶ್ಯಗಳನ್ನು ಸೆರೆಹಿಡಿಸುತ್ತಾನೆ. ಸ್ವಲ್ಪ ವಿಚಿತ್ರವೆನಿಸಿದರೂ ಇದು ಅರ್ಥಪೂರ್ಣ ಎನ್ನಿಸಿತು.

ಅದೇ ರೀತಿ 'ಶ್ರೀರಸ್ತು'ನಲ್ಲಿ ತಾಯಿಯ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳಲು ಸುಧಾರಾಣಿ ವಾಹನ ಚಾಲನೆ, ಭರತನಾಟ್ಯ, ಇಂಗ್ಲಿಷ್ ಕಲಿತು ಸೈ ಅನ್ನಿಸಿಕೊಳ್ಳುತ್ತಾರೆ. ಈ ರೀತಿ ಸಕಾರಾತ್ಮಕ ಚಿಂತನೆಗಳು ನೋಡುಗರಿಗೂ ಪ್ರೇರಣೆಯಾಗಬಹುದಲ್ಲವೇ?

—ವಾ. ಮುರಳೀಧರ, ತೀರ್ಥಹಳ್ಳಿ

## ಹಿತಕರ ಮಧ್ಯಾಹ್ನಕ್ಕೆ 'ಹಾಸ್ಯ ಲಾಸ್ಯ'

ಉದಯ ಕಾಮಿಡಿಯಲ್ಲಿ ಬರುವ ಹಾಸ್ಯ ದೃಶ್ಯಗಳು ಮನಸಿಗೆ ಮುದ ನೀಡಿ ರಂಜಿಸುತ್ತವೆ. ಇದರಿಂದ ಟೀವಿ ಧಾರಾವಾಹಿಗಳ ಏಕತಾನತೆಯಿಂದಲೂ ಸ್ವಲ್ಪ ಸಮಯ ಹೊರಬರಬಹುದು. ಮಧ್ಯಾಹ್ನದ ಸಮಯದಲ್ಲಿ 70ರ ದಶಕದ ಸಿನಿಮಾಗಳಲ್ಲಿ ನಟಿಸಿದ್ದ ನರಸಿಂಹರಾಜು, ಬಾಲಕೃಷ್ಣ, ದ್ವಾರಕೀಶ್, ಎನ್.ಎಸ್. ರಾವ್, ಮುಸುರಿ ಕೃಷ್ಣಮೂರ್ತಿ ಮೊದಲಾದವರ ಅಭಿನಯ ನೋಡುವುದೇ ಒಂದು ಭಾಗ್ಯ. ಅಂದಿನ ಆರೋಗ್ಯಕರ ಹಾಸ್ಯ ಸನ್ನಿವೇಶಗಳು ನಗೆ ಉಕ್ಕಿಸುವುದರಲ್ಲಿ ಒಂದು ಕೈ ಮುಂದೆ.

—ಭಾರತೀ ಗಂಗಾಧರ್, ಬೆಂಗಳೂರು

## ಸುದ್ದಿ ಸುಳ್ಳಿನ ಸರಕು ಆಗದಿರಲಿ

ನಮ್ಮ ಸುದ್ದಿ ವಾಹಿನಿಗಳಿಗೆ ಕ್ರೈಂ ಸುದ್ದಿ ಅಂದರೆ ಹಬ್ಬದೂಟ. ಕೊಲೆ ಸಂಬಂಧಿತ ನಟನ ಸುದ್ದಿಯಲ್ಲಂತೂ ತಾವೇ ನ್ಯಾಯದಾತರು ಎನ್ನುವಂತೆ ದೊಡ್ಡ ದನಿಯಲ್ಲಿ ಕೂಗಾಡುತ್ತಿದ್ದಾರೆ. ಇಲ್ಲಿ ಕೊಲೆಯ ಸುತ್ತಲಿನ ಅನೇಕಾನೇಕ ವಿಷಯಗಳನ್ನು ಹೇಳುತ್ತಿದ್ದಾರೆ. ಪ್ರಕರಣ ವಿಚಾರಣಾ ಹಂತದಲ್ಲಿದೆ. ಆರೋಪಿಗಳು ಪೊಲೀಸರ ಎದುರು ಹೇಳಿದ್ದಾರೆ ಎಂದು ಮತ್ತೆ ಮತ್ತೆ ಕಥೆಯನ್ನು ಒಪ್ಪಿಸುತ್ತಿದ್ದಾರೆ. ಪೊಲೀಸರು ತಮ್ಮ ವರದಿಯನ್ನು ಸೂಕ್ತ ನ್ಯಾಯ ಪ್ರಾಧಿಕಾರಕ್ಕೆ ಸಲ್ಲಿಸುವ ಪೂರ್ವದಲ್ಲಿ ಹೀಗೆ ವಿಷಯವನ್ನು ಸೋರಿಕೆ ಮಾಡಲು ಸಾಧ್ಯವೆ? ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ? ಹೀಗೆ ಮಾಡುವುದರಿಂದ ಪ್ರಕರಣ ಯಾವ ದಿಕ್ಕು ಹಿಡಿಯಬಹುದು? ವಾಹಿನಿಗಳ ಮಾಹಿತಿಯ ಮೂಲವಾದರೂ ಯಾವುದು? ಒಂದು ವೇಳೆ ಸುಳ್ಳನ್ನು ರಂಜನೀಯವಾಗಿ ಕಥೆ ಕಟ್ಟಿದರೆ ಆದ ತಪ್ಪಿಗೆ ಯಾರು ಹೊಣೆಗಾರರು?

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಕಥೆಯ ಮೂಲ ಮರೆತರೆ ಹೇಗೆ?

ಕಲರ್ಸ್ ಕನ್ನಡದ 'ರಾಮಾಚಾರಿ' ತಪ್ಪುಗಳನ್ನೇ ಮುಂದುವರಿಸಿಕೊಂಡು ಹೋಗುತ್ತಿದೆ. ಇದರಿಂದ ಕಥೆಯ ಮೂಲವಸ್ತು ಮರೆಯುತ್ತಿದೆ.

ರಾಮಾಚಾರಿ ತನ್ನದಲ್ಲದ ತಪ್ಪಿಗೆ ಜೈಲಿಗೆ ಹೋಗಿರುತ್ತಾನೆ. ಅಲ್ಲಿಂದ ಬಂದ ನಂತರವೂ ಅವನು ಕೆಲಸಕ್ಕೆ ಹೋಗುತ್ತಿಲ್ಲ. ಈಚೆಗೆ ರಾಮಾಚಾರಿ ಅವರ ತಂದೆ ನಾರಾಯಣಾಚಾರ್ಯರನ್ನು ಕೆಟ್ಟದಾಗಿ ಕಟ್ಟಿಕೊಡುವ ಮೂಲಕ ಕಥೆಯನ್ನು ಮುಂದುವರಿಸಲು ಯೋಚಿಸಿದ್ದಾರೆ. ಸನ್ನಡತೆ ಧಾರ್ಮಿಕ ವಿಚಾರದ ಆಚಾರ್ಯರಿಗೆ ಸತ್ಯಭಾಮಾ ಜೊತೆ ಸಂಬಂಧ ಇದೆ ಎಂದು ಬಿಂಬಿಸಿದ್ದಾರೆ. ಇದರ ಜೊತೆ ಹಿರಿಯ ಸೊಸೆ ವೈಶಾಖಾಳ ಕಿರಿಕಿರಿ ಮಾನ್ಯತಾಳ ಕುತಂತ್ರ ಸೇರಿ ಕಥೆಯನ್ನು ಮತ್ತಷ್ಟು ಗೊಂದಲಗೊಳಿಸುತ್ತಿದ್ದಾರೆ.

—ವಾಸುದೇವ, ಹಾಸನ

## ಒಳಿತಿಗಿರಲಿ ಎಳ್ಳಷ್ಟಾದರೂ ಜಾಗ

ದಿನ ಬೆಳಗಾದರೆ ಕೊಲೆ, ಸುಲಿಗೆ, ಅತ್ಯಾಚಾರ ಭ್ರಷ್ಟಾಚಾರ, ಅವನೇನಂದ ಇವನೇನಂದ ಎನ್ನುವುದೇ ಎಲ್ಲ ಸುದ್ದಿವಾಹಿನಿಗಳಿಗೆ 'ಬ್ರೇಕಿಂಗ್' ಆಗಿದೆ.

ರಾಯಚೂರಿನಲ್ಲಿ ಸಾರಿಗೆ ಬಸ್ಸಿನಲ್ಲಿ ಬಿಟ್ಟು ಹೋದ 2.50 ಲಕ್ಷ ಹಣವನ್ನು ಪ್ರಯಾಣಿಕರಿಗೆ ಹಿಂತಿರುಗಿಸಿದ ಪ್ರಾಮಾಣಿಕತೆ ಮೆರೆದ ಸಾರಿಗೆ ಸಿಬ್ಬಂದಿ, ಹಾಗೆಯೇ ದೇವದುರ್ಗದ ಕೂಲಿ ಕಾರ್ಮಿಕನೊಬ್ಬ ತನ್ನ ಸಂಪಾದನೆಯಿಂದ ಶಾಲಾ ಮಕ್ಕಳಿಗೆ ಸೈಕಲ್ ಕೊಡಿಸಿ ಮಾನವೀಯತೆ ಮೆರೆದಿದ್ದಾರೆ. ನಮ್ಮ ಸುತ್ತಮುತ್ತ ಪ್ರಾಮಾಣಿಕರೂ ಇದ್ದಾರೆ ಎನ್ನುವುದೂ ದೊಡ್ಡ 'ಬ್ರೇಕಿಂಗ್' ಸುದ್ದಿ ಅಲ್ಲವೇ?

'ಉತ್ತಮ ಸಮಾಜಕ್ಕಾಗಿ' ಎಂದು ಹೇಳಿಕೊಳ್ಳುವ ಟೀವಿಯಾದರೂ ಆ ಕಡೆ ನೋಡಬಾರದೆ?

—ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು